ಓಎಸ್ ನಂಬರಃ 254/2014
ಪಿಡಬ್ಲೂ-1

ದಿಃ 23-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಪಾಟೀ ಸವಾಲು ಶ್ರೀ.ಬಿ.ಆರ್.ವಾಯ್. ವಕೀಲರಿಂದಃ**

ನಾನು ವಿದ್ಯಾಭ್ಯಾಸ ಮಾಡಿಲ್ಲ. ಈ ದಾವೆಯ ಸಂಗತಿಗಳು ನನಗೆ ತಿಳಿದಿರುತ್ತದೆ. ನನ್ನ ತಾತನ ಹೆಸರು ಲಕ್ಷ್ಮಣ ಭರಮಾ ತೊರಣಹಳ್ಳಿ ಅಂದರೆ ಸರಿ. ಸದರಿ ತೊರಣಹಳ್ಳಿರವರನ್ನು ರಘುಗೊಳ ಎಂಬ ಅಡ್ಡ ಹೆಸರಿನಿಂದ ಸಹ ಕರೆಯುತ್ತಿದ್ದರು ಅಂದರೆ ಸರಿಯಲ್ಲ. ನನ್ನ ಮುತ್ತಜ್ಜ ಭರಮನ ಮರಣಕ್ಕೂ ಪೂರ್ವದಲ್ಲಿ ನನ್ನ ತಾತ ಲಕ್ಷ್ಮಣ ಮೃತ ಪಟ್ಟಿದ್ದರು ಅಂದರೆ ಸರಿ. ಸದರಿ ಲಕ್ಷ್ಮಣನಿಗೆ ಸಂತ್ರಾಮ ಹಾಗೂ ಕಲ್ಲಪ್ಪ ಎಂಬ ಇಬ್ಬರು ಮಕ್ಕಳು ಅಂದರೆ ಸರಿ. ಮೂಲ ಸರ್ವೆ ನಂ. 34 ನಮ್ಮ ಹಿರಿಯರ ಸ್ವತ್ತು ಅಂದರೆ ಸರಿ. ನನ್ನ ತಾತನ ಮರಣದ ನಂತರ ಆತನ ಮಕ್ಕಳು ಸಂತ್ರಾಮ ಹಾಗೂ ಕಲ್ಲನ ಹೆಸರು ಡೈರಿ ನಂ. 19 ರಂತೆ ಕಂದಾಯ ದಾಖಲೆಗಳಲ್ಲಿ ದಾಖಲಾಯಿತು ಅಂದರೆ ಸರಿ. ಅದರಂತೆ ಅವರುಗಳು ಸದರಿ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಅಂದರೆ ಸರಿ.

ಸರ್ವೆ ನಂ. 46 ನ್ನು ನನ್ನ ಮುತ್ತಜ್ಜ ಭರಮಾ ರೈತನಾತೆಯಲ್ಲಿ ಸಾಗುವಳಿ ಮಾಡುತ್ತಿದ್ದನು ಅಂದರೆ ಸರಿ. ಸದರಿ ಭರಮನಿಗೆ ಇಬ್ಬರು ಗಂಡು ಮಕ್ಕಳು ಅಂದರೆ ಸರಿ. ಸದರಿ ಭರಮನ ಮರಣದ ನಂತರ ಸದರಿ ಸಂತ್ರಾಮ ಹಾಗೂ ಕಲ್ಲಪ್ಪ ಸದರಿ ಸ್ವತ್ತಿನ ಸಾಗುವಳಿ ಮಾಡುತ್ತಿದ್ದರು ಅಂದರೆ ಸಾಕ್ಷಿ ಸದರಿ ಕಲ್ಲಪ್ಪ ಮಾತ್ರ ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳ ಉತಾರೆಯನ್ನು ನಾನು ನೋಡಿರುತ್ತೇನೆ. ಸದರಿ ಉತಾರೆಯಲ್ಲಿ ಸಂತ್ರಾಮ ಹಾಗೂ ಆತನ ಮಕ್ಕಳ ಹೆಸರು ನಮೂದು ಇದೆ ಅಂದರೆ ಸರಿಯಲ್ಲ. ಈ ದಾವೆ ಹೂಡುವ ಸಮಯದಲ್ಲಿ ದಾವಾ ಸ್ವತ್ತುಗಳ ಉತಾರೆಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ನಮ್ಮ ವಕೀಲರು ಉತಾರೆಯಲ್ಲಿ ಯಾರಯಾರ ಹೆಸರು ಇದೆ ಎಂದು ನನಗೆ ಓದಿ ಹೇಳಿರುತ್ತಾರೆಂದರೆ ಸರಿ. ಸದರಿ ಸಂತ್ರಾಮ ಯಾವ ವರ್ಷದಲ್ಲಿ ದತ್ತಕ ಹೋಗಿರುತ್ತಾನೆ ನನಗೆ ತಿಳಿದಿಲ್ಲ. ಆದರೆ ಸುಮಾರು 50 ವರ್ಷ ಆಗಿರಬಹುದು. ಸದರಿ ದತ್ತಕದ ಸಮಯದಲ್ಲಿ ಸದರಿ ಸಂತ್ರಾಮ ಹಾಗೂ ಕಲ್ಲಪ್ಪನಿಗೆ ದಾವಾ ಸ್ವತ್ತುಗಳಲ್ಲಿ ಅರ್ಧ ಪಾಲು ಇತ್ತು ಅಂದರೆ ಸರಿಯಲ್ಲ. ವಡ್ರಾಳ ಗ್ರಾಮದ ಸರ್ವೆ ನಂ. 106 ಸದರಿ ಸಂತ್ರಾಮನಿಗೆ ದತ್ತಕ ಹೋದ ನಂತರ ಬಂದಿರುತ್ತದೆ ಅಂದರೆ ಸರಿ. ಸದರಿ ಸರ್ವೆ ನಂ. 106 ಕ್ಕೆ ಕಲ್ಲಪ್ಪನಿಗೆ ಯಾವುದೇ ಹಕ್ಕು ಇರಲಿಲ್ಲ ಅಂದರೆ ಸಾಕ್ಷಿ ಸದರಿ ಸಂತ್ರಾಮನ ದತ್ತಕ ತಾಯಿ ಕಲ್ಲಪ್ಪನ ಅಜ್ಜಿ ಆಗಿದ್ದು, ಸದರಿ ಕಲ್ಲಪ್ಪನಿಗೆ ಸದರಿ ಸ್ವತ್ತಿನಲ್ಲಿ ಸಹ

ಪಾಲು ಇತ್ತು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ. 106 ರಲ್ಲಿ ಕಲ್ಲಪ್ಪನಿಗೆ ಹಕ್ಕು ಇದ್ದ ಬಗ್ಗೆ ಡೈರಿ ಆಗಿರುತ್ತದೆ. ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ನನಗೆ ತಿಳಿದಿರುತ್ತದೆ. ದತ್ತಕ ಆದ ನಂತರ ಸಹ ಸದರಿ ಸಂತ್ರಾಮ ಹಾಗೂ ಕಲ್ಲಪ್ಪ ಒಟ್ಟಿಗೆ ಇರುತ್ತಿದ್ದರು ಅಂದರೆ ಸರಿಯಲ್ಲ. ಅವರುಗಳು ವಿಶ್ವಾಸದಿಂದ ಇದ್ದರು ಅಂದರೆ ಸರಿ. ಆ ಕಾರಣ ಸದರಿ ಸಂತ್ರಾಮ ತನಗೆ ದತ್ತಕದಿಂದ ಬಂದ ಸರ್ವೆ ನಂ. 106 ಕ್ಕೆ ಕಲ್ಲಪ್ಪನ ಹೆಸರು ಅರ್ಧ ಹಿಸ್ಸೆಗೆ ದಾಖಲಿಸಿದ್ದನು ಅಂದರೆ ಸಾಕ್ಷಿ ಸದರಿ ಕಲ್ಲಪ್ಪನ ಅಜ್ಜಿಯ ಅರ್ಧ ಪಾಲು ಕಲ್ಲಪ್ಪನ ಹೆಸರಿಗೆ ದಾಖಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಸಂತ್ರಾಮ ತನ್ನ ಅರ್ಧ ಹಿಸ್ಸೆಯನ್ನು ಕಲ್ಲಪ್ಪನಿಗೆ ಬಿಟ್ಟುಕೊಟ್ಟ ಕಾರಣ ಆತನ ಹೆಸರು ಉತಾರೆಯಲ್ಲಿ ದಾಖಲಾಗಿತ್ತು ಅಂದರೆ ಸರಿಯಲ್ಲ. ಸದರಿ ಕಲ್ಲಪ್ಪನ ಹೆಸರಿಗೆ ಇದ್ದ ಅರ್ಧ ಹಿಸ್ಸೆಯನ್ನು ನಾವು ಮಾರಾಟ ಮಾಡಿರುತ್ತೇವೆ ಅಂದರೆ ಸರಿ. ಅದರಂತೆ ಸಂತ್ರಾಮ ಸಹ ತನ್ನ ಪಾಲಿನ ಅರ್ಧ ಹಿಸ್ಸೆಯನ್ನು ಮಾರಾಟ ಮಾಡಿರುತ್ತಾನೆ ಅಂದರೆ ಸರಿ.

ಕಜಗೊಂಡಣ ಹಟ್ಟಿ ಗ್ರಾಮದ ಡೈರಿ ಸಂಖ್ಯೆ 450 ಹಾಗೂ 752 ನ್ನು ನಾನು ನೋಡಿರುವುದಿಲ್ಲ. ಸದರಿ ಡೈರಿಯ ಆಗಲು ಯಾರು ವರದಿ ನೀಡಿದ್ದರು ಅಂದರೆ ಸಾಕ್ಷಿ ಕಲ್ಲಪ್ಪ ನೀಡಿರುತ್ತಾರೆಂದು ನುಡಿಯುತ್ತಾರೆ, ಸದರಿ ವರದಿಯ ಆಧಾರದ ಮೇಲೆ ಸದರಿ ದಾವಾ ಸರ್ವೆ ನಂ. 34 ಹಾಗೂ 64 ಕ್ಕೆ ಸದರಿ ಸಂತ್ರಾಮ ಹಾಗೂ ಕಲ್ಲಪ್ಪನ ಹೆಸರು ದಾಖಲಾಗಿತ್ತು ಅಂದರೆ ಸರಿಯಲ್ಲ. ಸದರಿ ಡೈರಿ ಸಂಖ್ಯೆ 450 1969 ನೇ ಸಾಲಿನಲ್ಲಿ ಹಾಗೂ ಡೈರಿ ಸಂಖ್ಯೆ 752 1984 ನೇ ಸಾಲಿನಲ್ಲಿ ಮಂಜೂರು ಆಗಿರುತ್ತವೆ ಅಂದರೆ ನನಗೆ ತಳಿದಿಲ್ಲ. ಸದರಿ ಡೈರಿಯ ಆದೇಶದ ವಿರುದ್ಧ ನಾವು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಅಂದರೆ ಸರಿ. ಸರ್ವೆ ನಂ. 34/3 ಹಾಗೂ 64/2 ಸ್ವತ್ತುಗಳ ಸಂಬಂದ ನನ್ನ ತಂದೆಯ ಮರಣದ ನಂತರ ನಮ್ಮ ಹೆಸರಿಗೆ ವಾರಸಾ ಆಗಿರುತ್ತದೆ ಅಂದರೆ ಸರಿ. ಆ ಸಮಯದಲ್ಲಿ ದಾವಾ ಸರ್ವೆ ನಂಬರಗಳಿಗೆ ಪ್ರತಿವಾದಿಯರ ಹೆಸರು ದಾಖಲಾಗಿತ್ತು ಅಂದರೆ ಸಾಕ್ಷಿ ಅದು ತಪ್ಪಾಗಿ ದಾಖಲಾಗಿತ್ತು ಎಂದು ನುಡಿಯುತ್ತಾರೆ. ಅದರ ವಿರುದ್ಧ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಅಂದರೆ ಸರಿ. ದಾವಾ ಸ್ವತ್ತುಗಳು ಸಂಪೂರ್ಣ ನಮ್ಮ ಸ್ವಾ ಧೀನದಲ್ಲಿ ಇದ್ದು, ನಾವೇ ಸಂಪೂರ್ಣ ಮಾಲಿಕರಾಗಿರುತ್ತೆವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ಸರ್ವೆ ನಂ. 46/2 ನ್ನು ನನ್ನ ತಂದೆ 1969 ರಲ್ಲಿ ಸ್ವಂತ ಖರೀದಿಸಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಕಲ್ಲಪ್ಪ ಹಾಗೂ ಸಂತ್ರಾಮ ಒಟ್ಟು ಕುಟುಂಬದಲ್ಲಿ ಇದ್ದ ಸಮಯದಲ್ಲಿ ಖರೀದಿಸಿದ್ದು ಆ ಕಾರಣ ಇಬ್ಬರ

ಹೆಸರು ಸಮವಾಗಿ ಸದರಿ ಸ್ವತ್ತಿಗೆ ದಾಖಲಾಗಿದೆ ಅಂದರೆ ಸರಿಯಲ್ಲ. ಸರ್ವೆ ನಂ. 46/1 ಹಾಗೂ 46/2 ಸ್ವತ್ತುಗಳ ವಿಂಗಡಣೆ ಆದ ವಿಷಯ ನನಗೆ ತಿಳಿದಿರುತ್ತದೆ. ಅದರಂತೆ ಉತ್ತರ ಭಾಗದ 3 ಎಕರೆ 5 ಗುಂಟೆ 8 ಆಣೆ ಜಮೀನು ಲಗಮಾ ಭರಮಾ ತೊರಣಹಳ್ಳಿ ಪಾಲಿಗೆ ಹೋಗಿರುತ್ತದೆ ಅಂದರೆ ಸರಿ. ಅದರಂತೆ ದಕ್ಷಿಣ ಭಾಗದ 4 ಎಕರೆ 26 ಗುಂಟೆ 8 ಆಣೆ ಸಂತ್ರಾಮ ಹಾಗೂ ಕಲ್ಲಪ್ಪನ ಪಾಲಿಗೆ ಬಂದಿರುತ್ತದೆ ಅಂದರೆ ಸಾಕ್ಷಿ ಕಲ್ಲಪ್ಪನ ಪಾಲಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ನಂತರ ಸಂತ್ರಾಮ ಹಾಗೂ ಕಲ್ಲಪ್ಪನ ನಡುವಿನ ವಿಭಾಗದಲ್ಲಿ ಸರ್ವೆ ನಂ. 34/1 ಸಂತ್ರಾಮನ ಪಾಲಿಗೂ ಸರ್ವೆ ನಂ. 34/3 ಕಲ್ಲಪ್ಪನ ಪಾಲಿಗೂ ಬಂದಿರುತ್ತದೆ ಅಂದರೆ ಸರಿಯಲ್ಲ. ಅದರಂತೆ ಸರ್ವೆ ನಂ. 46/2 ರಲ್ಲಿ 4 ಪಟ್ಟಿ ಮಾಡಿ ಸದರಿ ಸಂತ್ರಾಮ ಹಾಗೂ ಕಲ್ಲಪ್ಪ ತಲಾ ಎರಡು ಪಟ್ಟಿಗಳನ್ನು ಹಂಚಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದರಂತೆ ಡೈರಿ ಮಂಜೂರು ಆಗಿರುತ್ತದೆ ಅಂದರೆ ಸರಿಯಲ್ಲ. ಅದರಂತೆ ಡೈರಿ ಸಂಖ್ಯೆ 995 ರಂತೆ ನನ್ನ ತಂದೆಯ ಮರಣದ ನಂತರ ಸದರಿ ಸರ್ವೆ ನಂ. 34/3 ಹಾಗೂ ಸರ್ವೆ ನಂ. 46/2 ರಲ್ಲಿ ಅರ್ಧ ಪಾಲಿಗೆ ನಮ್ಮ ಹೆಸರು ದಾಖಲಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಅದರಂತೆ ಸಂತ್ರಾಮನ ಮರಣದ ನಂತರ ಸದರಿ ಸರ್ವೆ ನಂ. 34/1 ಹಾಗೂ ಸರ್ವೆ ನಂ. 46/2 ರಲ್ಲಿ ಅರ್ಧ ಪಾಲಿಗೆ ನಮ್ಮ ಹೆಸರು ದಾಖಲಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯರು ಮೋಸದಿಂದ ತಮ್ಮ ಹೆಸರು ದಾಖಲಿಸಿಕೊಂಡಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ಸದರಿ ಸರ್ವೆ ನಂ. 34/1 ಹಾಗೂ ಸರ್ವೆ ನಂ. 46/2 ರಲ್ಲಿ ಅರ್ಧ ಪಾಲಿನಲ್ಲಿ ಪ್ರತಿವಾದಿಯರೇ ಸ್ವಾ ಧೀನದಲ್ಲಿ ಇರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತುಗಳಿಗೆ ಪ್ರತಿವಾಯರೇ ಸಂಪೂರ್ಣ ಮಾಲಿಕರೇ ಅಂದರೆ ಸರಿಯಲ್ಲ. ಸದರಿ ಸ್ವತ್ತಿನ ಪ್ರತಿವಾದಿಯರ ಸ್ವಾ ಧೀನಕ್ಕೆ ನಾವು ಈವರೆಗೆ ತಕರಾರು ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(ಟಿ.ಶ್ರೀಕಾಂತ)
ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ